**ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ ಎಫ್ ಎ)**
ತನ್ನ **ಪ್ರೊಜೆಕ್ಟ್ 560 ಕಾರ್ಯಕ್ರಮ**ದಡಿಯಲ್ಲಿ

***ಕಲಾ ಯೋಜನೆಗಳಿಗೆ (ಸಂಶೋಧನೆ/ ಅಭ್ಯಾಸ)***

ಅರ್ಜಿಗಳನ್ನು ಆಹ್ವಾನಿಸುತ್ತದೆ.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** May 03, 2024

ಬೆಂಗಳೂರನ್ನು ವೇದಿಕೆಯಾಗಿಸಿ, ಚಿತ್ರಪಟವನ್ನಾಗಿಸಿ, ಅಥವಾ ನೋಟ್ ಪುಸ್ತಕವಾಗಿಸಿ, ಡಿಜಿಟಲ್ ಅಂಗಳವನ್ನಾಗಿಸಿ! ಅದರ ಹಲವುಬಗೆಯ ದನಿಗಳು, ಸ್ಥಳಗಳು, ಇತಿಹಾಸಗಳು, ನೆನಪುಗಳು, ಆಸೆ-ಆಕಾಂಕ್ಷೆಗಳು ಹಾಗೂ ಅಭಿವ್ಯಕ್ತಿಗಳನ್ನು ಕಂಡುಕೊಳ್ಳಿ.

ಬೆಂಗಳೂರಿಗರಾಗಿರುವುದೆಂದರೇನು? ಕಲಾತ್ಮಕ ಕಲ್ಪನೆಗಳಿಗೆ ಈ ನಗರ ಹೇಗೆ ಇಂಬು ನೀಡುತ್ತದೆ?
ಕಲಾವಿದರಿಗೆ ಅಥವಾ ಸೃಜನಶೀಲ ಸಂಶೋಧಕರಿಗೆ ಬೆಂಗಳೂರು ಒಡ್ಡುವ ಸವಾಲುಗಳು, ನೀಡುವ ಶಕ್ತಿ ಏನು? ಬೆಂಗಳೂರು ನಿಮ್ಮ ಮನಸಿನಲ್ಲಿದ್ದರೆ, ಈ ಕರೆ ನಿಮಗಾಗಿ.

ಐ ಎಫ್ ಎ , ಬೆಂಗಳೂರಿನ ಭೂತ-ವರ್ತಮಾನ-ಭವಿಷ್ಯಗಳೊಂದಿಗೆ ವಿಮರ್ಶಾತ್ಮಕವಾಗಿ ತೊಡಗಿಕೊಳ್ಳುವ (ಸಂಶೋಧನೆ ಅಭ್ಯಾಸ) ಕಲಾ ಯೋಜನೆಗಳನ್ನು ಕಾರ್ಯಗತಗೊಳಿಸ ಬಯಸುತ್ತದೆ. ಕಲಾವಿದರು ಹಾಗು ಶಾಸ್ತ್ರಜ್ಞರನ್ನು ಒಟ್ಟಾಗಿಸುವ ಸಹಯೋಗಗಳಿಗೂ ಸ್ವಾಗತವಿದೆ. ಯೋಜನೆಗಳ ಫಲವಾಗಿ ಕಲಾ ಪ್ರಸ್ತುತಿಗಳು, ಪ್ರದರ್ಶನಗಳು, ಇನ್ಸ್ಟಾಲೇಷನ್ಗಳು, ಚಲನಚಿತ್ರಗಳು, ಸಂಶೋಧನಾ ಬರಹಗಳು/ ಪ್ರಬಂಧಗಳು ಅಥವಾ ಅಂತರ್ಶಿಸ್ತೀಯ ಕೃತಿಗಳು ಇರಬಹುದು. ಇವುಗಳ ಅಂತಿಮ ಪ್ರಸ್ತುತಿ ಅವಶ್ಯಕವಾಗಿ ಸಾರ್ವಜನಿಕವಾಗಿ ಹಾಗೂ ಭೌತಿಕರೂಪದಲ್ಲಿರಬೇಕಿದ್ದು, ಅವಶ್ಯವಿದ್ದೆಡೆ ವರ್ಚುಯಲ್ ಅಂಶಗಳನ್ನು ಒಳಗೊಂಡಿರಬಹುದು. **(**ಕೇವಲ ವರ್ಚುಯಲ್ ಪ್ರಸ್ತುತಿಗಳನ್ನು ನಾವು ಪ್ರೋತ್ಸಾಹಿಸುವುದಿಲ್ಲ**).**

**ಯೋಜನೆಯ ಅವಧಿ:** ಗರಿಷ್ಠ 12 ತಿಂಗಳುಗಳು

**ಅನುದಾನ ಮಿತಿ:** ಗರಿಷ್ಠ ರೂ 4,00,000/-
ಯೋಜನಾ ವೆಚ್ಚದ 35% ಮೀರದಂತೆ ನೀವು ನಿಮ್ಮ ಗೌರವಧನಕ್ಕಾಗಿ ಕೋರಿಕೆ ಸಲ್ಲಿಸಬಹುದು.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** May 03, 2024

**ಪ್ರಸ್ತಾವನೆಗಳನ್ನು ಯಾರು ಕಳುಹಿಸಬಹುದು?**
ಕಲಾವಿದರು, ಸಂಶೋಧಕರು/ ಶಾಸ್ತ್ರಜ್ಞರು ಅರ್ಜಿ ಸಲ್ಲಿಸಬಹುದು. ನೀವು ಬರಹಗಾರರು, ಕವಿಗಳು, ಪ್ರದರ್ಶನ ಕಲಾವಿದರು, ದೃಶ್ಯ ಕಲಾವಿದರು, ಚಲನಚಿತ್ರಕಾರರು, ಹೊಸ ಮಾಧ್ಯಮ ಹಾಗೂ ಡಿಜಿಟಲ್ ಕಲಾವಿದರು ಅಥವಾ ಅಂತರ್ಶಿಸ್ತೀಯ ಕೆಲಸದಲ್ಲಿ ತೊಡಗಿದವರಿರಬಹುದು. ಅರ್ಜಿದಾರರು ಬೆಂಗಳೂರಿನಲ್ಲಿ ನೆಲೆಸಿದವರಾಗಿರಬೇಕು, ಹಾಗೂ ಯೋಜನೆಯನ್ನು ಬೆಂಗಳೂರಿನಲ್ಲೇ ಕಾರ್ಯಗತಗೊಳಿಸಬೇಕು.

**ಅರ್ಹತೆ:**
ನೀವು ಭಾರತೀಯ ನಾಗರಿಕರಾಗಿದ್ದಲ್ಲಿ ಯೋಜನಾ ಪ್ರಸ್ತಾವನೆಯನ್ನು ಕಳುಹಿಸಲು ನೀವು ಅರ್ಹರು. ಯೋಜನೆಯಡಿಯಲ್ಲಿ ನಿಮ್ಮ ಜೊತೆ ಸಹಯೋಗ ಕೈಗೊಳ್ಳುವ ಕಲಾವಿದರು ಕೂಡ ಭಾರತೀಯ ನಾಗರಿಕರಾಗಿರುವುದು ಅವಶ್ಯಕ. ವಿವರಗಳಿಗಾಗಿ ಈ ಲಿಂಕ್ ನೋಡಿ.

**ಯೋಜನಾ ಪ್ರಸ್ತಾವನೆಗಳನ್ನು ಹೇಗೆ ಕಳುಹಿಸಬೇಕು?**
ನಮಗೆ ಈ ಮಾಹಿತಿಗಳೊಡನೆ ಪ್ರಸ್ತಾವನೆಯನ್ನು ಕಳುಹಿಸಿ:

- ನಿಮ್ಮ ಪ್ರಸ್ತುತ ಸಂಶೋಧನೆ ಅಥವಾ ಕಲಾ ಅಭ್ಯಾಸ, ಕಲಾವಿದರಾಗಿ/ ಸಂಶೋಧಕರಾಗಿ ಬೆಂಗಳೂರಿನ ಬಗೆಗೆ ನಿಮ್ಮ ಕಾಳಜಿಗಳು ಹಾಗೂ ಆಸಕ್ತಿಗಳು
- ಯೋಜನೆಯ ವಿವರಗಳು
- ನಿಮ್ಮ ಜೊತೆ ಸಹಯೋಗ ಕೈಗೊಳ್ಳುವ ಕಲಾವಿದರು ಇದ್ದಲ್ಲಿ , ಹಾಗೂ ಈ ಸಹಯೋಗದ ವಿವರಗಳು
- ವಿಸ್ತೃತ ಸಮಯಸೂಚಿ ಹಾಗೂ ಆಯವ್ಯಯ ಪತ್ರ
- ಬರಹ, ಭಾವಚಿತ್ರಗಳು, ನಿಮ್ಮ ಹಿಂದಿನ ಕೆಲಸದ ಧ್ವನಿ/ ವಿಡಿಯೋ ಮುದ್ರಿಕೆಗಳು ಇತ್ಯಾದಿ ಸಹಾಯಕ ವಸ್ತುಗಳು
- ನಿಮ್ಮ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಈಮೈಲ್ ವಿಳಾಸದೊಂದಿಗೆ ನಿಮ್ಮ ಸ್ವವಿವರ (ಬಯೋಡೇಟಾ)

ನಿಮ್ಮ ಪ್ರಸ್ತಾವನೆಯನ್ನು ಕಳುಹಿಸುವ ಮೊದಲು ಆ ಕುರಿತಂತೆ ಚರ್ಚೆ ಮಾಡಬಯಸಿದಲ್ಲಿ ಅಥವಾ ಯಾವುದೇ ಪ್ರಶ್ನೆ/ಸಂದೇಹಗಳಿದ್ದಲ್ಲಿ, ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ **April 26, 2024** ರ ಒಳಗೆ ಜಾನ್ ಜೇವಿಯರ್ಸ್ ಅವರನ್ನು ಮಿಂಚಂಚೆಯ ಮೂಲಕ ಸಂಪರ್ಕಿಸಿ: john@indiaifa.org. ನಿಮ್ಮ ಅಂತಿಮ ಅರ್ಜಿಯನ್ನು 25MB ಮೀರದ ಒಂದೇ ಮಿಂಚಂಚೆಯ ಮುಖಾಂತರ ಜಾನ್ ಜೇವಿಯರ್ಸ್, ಕಾರ್ಯಕ್ರಮ ಅಧಿಕಾರಿ - ಇವರಿಗೆ (ಮಿಂಚಂಚೆ : john@indiaifa.org) **'ಪ್ರಾಜೆಕ್ಟ್ 560ಕ್ಕೆ** ಅರ್ಜಿ **(ಕಲಾ** ಯೋಜನೆಗಳು**)'** ಎನ್ನುವ ವಿಷಯ ಸೂಚಿಯೊಂದಿಗೆ, **May 03, 2024** ರಂದು ಅಥವಾ ಅದಕ್ಕೆ ಮೊದಲು ಕಳುಹಿಸಿ.

**ನೀವು ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ಪ್ರಸ್ತಾವನೆಯನ್ನು ಕಳುಹಿಸಬಹುದು.**

ಅಪೂರ್ಣ ಪ್ರಸ್ತಾವನೆಗಳನ್ನು ಹಾಗೂ ಅಪೇಕ್ಷಿತ ಅರ್ಹತೆ ಹೊಂದಿರದ ಅರ್ಜಿದಾರರ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ.

**ಆಯ್ಕೆಯ ಪ್ರಕ್ರಿಯೆ:**
ಕೊನೆಯ ಸುತ್ತಿಗೆ ಆಯ್ಕೆಯಾದ ಪ್ರಸ್ತಾವನೆಗಳನ್ನು ಬಾಹ್ಯ ತಜ್ಞರ ಆಯ್ಕೆ ಸಮಿತಿ ಮೌಲ್ಯಮಾಪನ ಮಾಡುತ್ತದೆ. ಇದಕ್ಕಾಗಿ ಅರ್ಜಿದಾರರು ತಮ್ಮ ಯೋಜನೆಯ ಪರಿಕಲ್ಪನೆಯನ್ನು ಈ ಸಮಿತಿಯ ಮುಂದೆ ಪ್ರತಿಪಾದಿಸಬೇಕಾಗುತ್ತದೆ. ಈ ಬಗ್ಗೆ ಐ ಎಫ್ ಏಯ ನಿರ್ಧಾರವೇ ಅಂತಿಮ.ಆಯ್ಕೆಯಾದ ಯೋಜನೆಗಳನ್ನು **August 2024** ರಲ್ಲಿ ಘೋಷಿಸಲಾಗುವುದು.
ಆಯ್ಕೆಯಾದ ಎಲ್ಲ ಯೋಜನೆಗಳನ್ನೂ ಐ ಎಫ್ ಏ ಸ್ವತಃ ಕಾರ್ಯಗತಗೊಳಿಸುತ್ತದೆ.
ಐ ಎಫ್ ಎ ಮಕ್ಕಳನ್ನೊಳಗೊಂಡಂತೆ ಎಲ್ಲರಿಗೂ ಬೆಂಬಲ**,** ಗೌರವ, ರಕ್ಷಣೆ ನೀಡುವ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಬದ್ಧವಾಗಿದೆ**.** ಎಲ್ಲ ಅರ್ಜಿದಾರರೂ ಇದಕ್ಕೆ ಬದ್ಧವಾಗಿದ್ದು**,** ಇದನ್ನು ಸದಾ ಎತ್ತಿಹಿಡಿಯಬೇಕು**.**

ಪ್ರಾಜೆಕ್ಟ್ **560** ರ ಬಗ್ಗೆ **:**
ಪ್ರಾಜೆಕ್ಟ್ **560** ಬೆಂಗಳೂರಿಗಾಗಿ ಐ ಎಫ್ ಏ ನ ಉಪಕ್ರಮ. ಬೆಂಗಳೂರಿನ ಅಂಚೆ ಸಂಖ್ಯೆ (ಪಿನ್ ಕೋಡ್) ನ ಮೊದಲ ಮೂರು ಅಂಕೆಗಳಿಂದ ತನ್ನ ಹೆಸರನ್ನು ಪಡೆದಿರುವ ಪ್ರಾಜೆಕ್ಟ್ 560, ಕಲಾವಿದರು, ಶಾಸ್ತ್ರಜ್ಞರು , ಸಂಸ್ಥೆಗಳು ಹಾಗೂ ನೆರೆಹೊರೆಗಳನ್ನು ಈ ಊರಿನೊಂದಿಗೆ ಸೃಜನಶೀಲವಾಗಿ ಹಾಗೂ ವಿಮರ್ಶಾತ್ಮಕವಾಗಿ ತೊಡಗಿಕೊಳ್ಳಲು ಉತ್ತೇಜಿಸುತ್ತದೆ. ಇದರ ಮೂಲಕ ನಾಗರಿಕರಿಗೆ ಊರಿನೊಂದಿಗಿನ ತಮ್ಮ ಸಂಬಂಧವನ್ನು ಹೊಸ ರೀತಿಯಲ್ಲಿ ನೋಡಲು ಸಾಧ್ಯವಾಗಿಸುವ ವರ್ಣರಂಜಿತವಾದ ಒಂದು ಅನುಭವವನ್ನು ಸಾಧ್ಯವಾಗಿಸುವುದು ಐ ಎಫ್ ಏ ನ ಉದ್ದೇಶ.
ನಮ್ಮ **560.** ನಮ್ಮ ಯೋಜನೆ **(**ಪ್ರಾಜೆಕ್ಟ್**).** ನಮ್ಮ ಅಂಚೆ ಸಂಖ್ಯೆ**.**

2024-25ರ ಕಲಾಭ್ಯಾಸ ಯೋಜನೆಗೆ **BNP** ಪರಿಬಾಸ್ ಇಂಡಿಯಾ ನೆರವು ನೀಡುತ್ತಿವೆ
.